ಪುಸ್ತಕವನ್ನು ರೀತಾಗೆ ವಾಪಸ್ ಕೊಟ್ಟೆ. ರೀತಾ ಆಶ್ಚರ್ಯಪಡಿಸುವುದನ್ನು ಮಾತ್ರ ಬಿಟ್ಟಿರಲಿಲ್ಲ.

'ನೋಡು, ಈ ಮಾತ್ರೆಯನ್ನು ಅಮ್ಮ ಕೊಟ್ಟಿದ್ದಾರೆ', ರೀತಾ ಬಿಳಿ ಬಣ್ಣದ ಒಂದು ಸಣ್ಣ ಮಾತ್ರೆಯನ್ನು ತೋರಿಸಿದ್ದಳು.

'ಇದು ಔಷಧಿಯೇ?'

'ಹೂಂ, ತಿಂಗಳ ದಿನವನ್ನು ಮುಂದಕ್ಕೆ ಹಾಕುವ ಔಷಧಿ'.

'ಅಂದ್ರೆ?'

'ನನ್ನ ಮುಟ್ಟಿನ ದಿನ ಮೊದಲ ರಾತ್ರಿಯಂದು ಬರುತ್ತದೆ, ಅದಕ್ಕೇ ಅಮ್ಮ ಈ ಮಾತ್ರೆಯನ್ನು ಕೊಟ್ಟಿದ್ದಾರೆ. ನಾನಿದನ್ನು ಮೊದಲ ರಾತ್ರಿಗೆ ಒಂದು ದಿನದ ಮೊದಲು ತಿಂದರೆ ಮುಟ್ಟು ಮುಂದಕ್ಕೆ ಹೋಗುತ್ತೆ,' ರೀತಾ ರಹಸ್ಯವನ್ನು ಬಿಚ್ಚಿಟ್ಟಳು.

'ನಿಜವಾಗ್ಲೂ?' ನನಗೆ ಆಶ್ಚರ್ಯವಾಗಿತ್ತು. ಇದು ಸಾಧ್ಯವೇ? ನನ್ನ ಅಮ್ಮ ನನಗೆಂದೂ ಈ ಬಗ್ಗೆ ಹೇಳಿಲ್ಲ. ಬಹುಶಃ ಮದುವೆ ನಿಶ್ಚಯವಾದ ನಂತರ ಈ ವಿಷಯಗಳನ್ನು ಹೇಳಬಹುದು ಎಂದು ನನಗೆ ನಾನೇ ಹೇಳಿಕೊಂಡೆ.

'ಇದರ ಹೆಸರೇನು?' ಈ ಪ್ರಶ್ನೆಯನ್ನು ಏಕೆ ಕೇಳಿದೆನೋ...

ರೀತಾ ಮಾತ್ರೆಯ ಹೆಸರು ಹೇಳಿದಳು, ನಾನದನ್ನು ಬಾಯಿಪಾಠ ಮಾಡಿದೆ. ಈ ಮಾತ್ರೆ ತುಂಬಾ ಉಪಯೋಗಕ್ಕೆ ಬರುತ್ತದೆ ಎಂದು ನನಗೆ ಅನ್ನಿಸಿತು. ಆದರೆ ಮರುದಿನವೇ ಮಾತ್ರೆಯ ಹೆಸರನ್ನು ಮರೆತೆ. ಈ ಘಟನೆ ನಡೆದು ಅನೇಕ ವರ್ಷಗಳ ನಂತರ, ನನಗೆ ಆ ಮಾತ್ರೆಯ ಅವಶ್ಯಕತೆ ಉಂಟಾಯಿತು, ಆಗ ನಾನು ಸಂಕೋಚದಿಂದ ಓರ್ವ ಮಹಿಳಾ ವೈದ್ಯರ ಬಳಿಗೆ ಹೋಗಬೇಕಾಯಿತು; ಏಕೆಂದರೆ ಅದುವರೆಗೆ ನಾನು, ಇಂಥ ಮಾತ್ರೆಗಳನ್ನು ವೈದ್ಯರ ಸಲಹೆಯಿಲ್ಲದೆ ತಿನ್ನಬಾರದು ಎನ್ನುವಷ್ಟು ತಿಳಿವಳಿಕಸ್ತೆಯಾಗಿದ್ದೆ.



ರೀತಾಳ ವಿವಾಹದ ದಿನಾಂಕ ಸಮೀಪಿಸುತ್ತಿದ್ದಂತೆ, ಅವಳ ಮಾತುಗಳಲ್ಲಿ ಲೈಂಗಿಕ ವಿಷಯಕ್ಕೆ ಸಂಬಂಧಿಸಿದ ವಿಷಯಗಳೇ ಹೆಚ್ಚಿರುತ್ತಿದ್ದವು. ನಾನು ಅಂಥ ಮಾತುಗಳನ್ನು ಕೇಳಿ ರೇಗುತ್ತಿದ್ದೆ. ಆ ಮಾತುಗಳು ನನ್ನನ್ನು ಸಿಲುಕಿಸುತ್ತಿದ್ದವು.

ಅಂತೂ ರೀತಾಳ ವಿವಾಹ ನೆರವೇರಿತು, ಅವಳು ತನ್ನ ಅತ್ತೆ ಮನೆಗೆ ಬೀಳ್ಕೊಂಡು ಹೋದಳು. ನನ್ನ ಅವಳ ಸಂಬಂಧ ಸದಾ ಕಾಲಕ್ಕೂ ತಪ್ಪಿತು. ಇದಕ್ಕೆ ಎರಡು ಕಾರಣಗಳಿದ್ದವು: ಮೊದಲನೆಯದಾಗಿ, ಅತ್ತೆ ಮನೆಯಿಂದ ಅವಳು ಮೊದಲ ಬಾರಿಗೆ ಬಂದಾಗ ಅವಳ ಮಾತಿನಲ್ಲಿ ತನ್ನ ಮತ್ತು ತನ್ನ ಪತಿಯ ದೈಹಿಕ ಸಂಬಂಧಗಳ ಬಗ್ಗೆ ಮಾತ್ರ ಹೇಳುತ್ತಿದ್ದಳು, ಆದರೆ ಇವು ನನಗೆ ಅರ್ಥವಾಗುತ್ತಿರಲಿಲ್ಲ. ಎರಡನೆಯದಾಗಿ, ಆ ದಿನಗಳಲ್ಲಿ ಅಮ್ಮ ಮಾನಸಿಕವಾಗಿ ತುಂಬಾ ವ್ಯಗ್ರರಾಗಿದ್ದರು, ನಾನು ಅವರ ಸಮಸ್ಯೆಗಳನ್ನು ತಿಳಿಯಲು ಪ್ರಯತ್ನಿಸುತ್ತಿದ್ದೆ.

ಯಾವ ದಿನಗಳಲ್ಲಿ ರೀತಾಳ ವಿವಾಹದ ಸಿದ್ಧತೆಗಳು ಭರದಿಂದ ನಡೆಯುತ್ತಿದ್ದವೋ, ಆ ದಿನಗಳಲ್ಲಿ ನಮ್ಮ ಮನೆಯಲ್ಲಿ ವಿಚಿತ್ರ ಘಟನೆಯೊಂದು ಘಟಿಸಿತು. ಅದೊಂದು ದಿನ ಅಕಸ್ಮಾತ್ ಸೆಲಟ್ ಅಂಕಲ್‌ರ ಹೆಂಡತಿ ಅಂದರೆ ಸೆಲಟ್ ಆಂಟಿ ನಮ್ಮ ಮನೆಗೆ ಬಂದು ಅಮ್ಮನೊಂದಿಗೆ ಮನಸಾರೆ ಜಗಳವಾಡಿದರು. ಅವರು ಅಮ್ಮನನ್ನು ತುಂಬಾ ನಿಂದಿಸಿದರು, ಅವರಿಗೆ 'ಹೆಣ್ಣು ನಾಯಿ', 'ವೇಶ್ಯೆ' ಎಂದೂ ನಿಂದಿಸಿದರು. ಇದನ್ನೆಲ್ಲಾ ನೋಡಿ ನಾನು ರೋದಿಸಿದೆ. ಅಮ್ಮನಿಗೆ ತುಂಬಾ ಆಘಾತವಾಯಿತು. ಈ ಅಪ್ರಿಯ ಘಟನೆ ನನ್ನೆದುರು ಸಂಭವಿಸಿದ್ದು ಅವರನ್ನು ತುಂಬಾ ದುಃಖಕ್ಕೀಡು ಮಾಡಿತ್ತು.

'ಪ್ಲೀಸ್, ಅತ್ತಿಗೆ! ಮಗುವಿನೆದುರು ಹೀಗೆ ಮಾತಾಡಬೇಡಿ.' ಅಮ್ಮ ಸೆಲಟ್ ಆಂಟಿಯನ್ನು ಸುಮ್ಮನಾಗಿಸಲು ಪ್ರಯತ್ನಿಸಿದ್ದರು.

'ಏಕೆ ಮಾತಾಡಬಾರದು? ಇವಳ ಅಮ್ಮ ಎಂಥೆಂಥ ನಾಟಕ ಮಾಡ್ತಾಳೆ ಅನ್ನೋದು ಮಗಳಿಗೂ ತಿಳಿಯಲಿ', ಸೆಲಟ್ ಆಂಟಿ ಇನ್ನಷ್ಟು ಗಟ್ಟಿಯಾಗಿ ಹೇಳಿದ್ದರು. ನಾನು ದೊಡ್ಡವಳಾಗಿರಲಿಲ್ಲ, ಆದರೆ ಮಗುವಾಗಿಯೂ ಇರಲಿಲ್ಲ. ನನಗೆ ಸೆಲಟ್ ಆಂಟಿಯವರ ಮಾತುಗಳು ಅರ್ಥವಾಗುತ್ತಿದ್ದವು. ಅವರು ನನ್ನೆದರು ಅಮ್ಮನನ್ನು ನಿಂದಿಸುತ್ತಿದ್ದರು, ನಾನು ಹೆದರುತ್ತಾ ನಿಂತಿದ್ದೆ. ಸೆಲಟ್ ಅಂಕಲ್ ತಾವೇ ಬರ್ತಾರೆ, ಅಮ್ಮನ ಅಸಹಾಯಕತೆಯ ಲಾಭ ಪಡೀತಾರೆ ಎಂದು ಸೆಲಟ್ ಆಂಟಿಯವರಿಗಿಂತ ದುಪ್ಪಟ್ಟು ಗಟ್ಟಿಯಾಗಿ ಕೂಗಬೇಕಿತ್ತೆಂದು ಈಗ ನನಗೆ ಅನ್ನಿಸುತ್ತದೆ. ಆದರೆ ನಾನು ಹೇಳದಾಗಿದ್ದೆ. ನನ್ನಿಂದ ರೋದಿಸುವುದನ್ನು ಹೊರತುಪಡಿಸಿ, ಬೇರೇನೂ ಸಾಧ್ಯವಿರಲಿಲ್ಲ, ನಾನು ರೋದಿಸುತ್ತಲೇ ಇದ್ದೆ.

ಸುಮಾರು ಅರ್ಧ ಗಂಟೆ ವಟವಟ ಎಂದ ಸೆಲಟ್ ಆಂಟಿ ನಂತರ ಮರಳಿ ಹೋದರು. ನಾನಾಗ ಅಮ್ಮನ ಇಡೀ ಶರೀರ ಕಂಪಿಸುತ್ತಿರುವುದನ್ನು ನೋಡಿದೆ. ನಾನು ರೋದಿಸುವುದನ್ನು ನೋಡಿ ಅಮ್ಮ ನನ್ನನ್ನು ಸಮಾಧಾನಪಡಿಸಲು ನನ್ನನ್ನು ತಬ್ಬಿಕೊಂಡರು. ನಂತರ ಅವರೂ ರೋದಿಸಿದರು. ಅಪ್ಪನಿಂದ ಬೇರೆಯಾದ ನಂತರ ಅಮ್ಮ ಈ ರೀತಿ ರೋದಿಸುವುದನ್ನು ಮೊದಲ ಬಾರಿಗೆ ನೋಡಿದ್ದೆ. ನಾನು ಅಳುವುದನ್ನು ಮರೆತು ಅವರನ್ನು ಸಮಾಧಾನಪಡಿಸಿದೆ. ನಾನು ಅಮ್ಮನನ್ನು ಒಳಗೆ ಕರೆದುಕೊಂಡು ಹೋಗಿ ಮಂಚದಲ್ಲಿ ಮಲಗಿಸಿದೆ. ಅವರಿಗೆ ನಿದ್ರೆ ಬರಲಿ, ಅದರಿಂದ ಅವರ ಮನಸ್ಸು ಶಾಂತವಾಗಲಿ ಎಂಬುದು ನನ್ನ ಉದ್ದೇಶವಾಗಿತ್ತು. ನಂತರ ಅಮ್ಮನನ್ನು ನಿದ್ರೆ ಯಾವಾಗ ಆವರಿಸಿತೋ ತಿಳಿಯಲಿಲ್ಲ, ಏಕೆಂದರೆ ನಾನೂ ಸಹ ತೂಕಡಿಸುತ್ತಾ ನಿದ್ರೆ ಮಾಡಿದ್ದೆ.

ಅಂದು ಸಂಜೆ ನಮ್ಮ ಮನೆಯಲ್ಲಿ ಒಲೆ ಹೊತ್ತಲಿಲ್ಲ. ನಾವು ಅಡುಗೆಯನ್ನು ಮಾಡಲಿಲ್ಲ, ಹಾಗೆಯೇ ಉಪವಾಸವಿದ್ದೆವು. ಮರುದಿನ ಬೆಳಿಗ್ಗೆ ನನಗೆ ಅಮ್ಮನಿಗಿಂತ ಮೊದಲು ಎಚ್ಚರವಾಯಿತು. ನನಗೆ ಹಿಂದಿನ ದಿನದ ಸೆಲಟ್ ಆಂಟಿಯವರ ರಂಪಾಟ ನೆನಪಾಯಿತು. ಅಮ್ಮ ರೋದಿಸಿದ್ದು ಸಹ ನೆನಪಾಯಿತು. ನಾನು ಮತ್ತೊಮ್ಮೆ 'ದೊಡ್ಡವಳಾಗಬೇಕು' ಎಂದು ಅನ್ನಿಸಿತು. ನಾನು ಕೂಡಲೇ ಹಲ್ಲುಗಳಿಗೆ ಬ್ರಶ್ ಮಾಡಿದೆ. ಚಹಾ ತಿಂಡಿ ಮಾಡಿ ಅಮ್ಮನನ್ನು ಎಬ್ಬಿಸಲು ಹೋದೆ. ಅಮ್ಮನ ಮುಖ ದಯೆಗೆ ಪಾತ್ರವಾಗಿತ್ತು. ಅವರು ರೋದಿಸುತ್ತಲೇ ನಿದ್ರೆಗೆ ವಶವಾಗಿದ್ದರು. ನಾನು ಎಬ್ಬಿಸಿದ ನಂತರ ಅಮ್ಮ ಎದ್ದು ಬ್ರಶ್ ಮಾಡಿದರು. ನಂತರ ನಾವಿಬ್ಬರು ತಿಂಡಿ ತಿನ್ನಲು ಕೂತೆವು.

'ಇವತ್ತು ನನಗೆ ಆಫೀಸಿಗೆ ಹೋಗುವ ಮನಸ್ಸಿಲ್ಲ, ನೀನು ಕಾಲೇಜಿಗೆ ಹೋಗು,' ಅಮ್ಮ ಹೇಳಿದರು. ಅವರ ಧ್ವನಿಯಲ್ಲಿ ಶಾಂತತೆ ಇರಲಿಲ್ಲ.

'ನಾನೂ ಇವತ್ತು ಚಕ್ಕರ್ ಹಾಕ್ತೀನಿ' ನಾನು ಮುಗುಳ್ನಗಲು ಪ್ರಯತ್ನಿಸಿದೆ.

'ಬೇಡ, ಚಕ್ಕರ್ ಹೊಡೆಯಬಾರದು, ನೀನು ಕಾಲೇಜಿಗೆ ಹೋಗು', ಅಮ್ಮ ಕೃತಕವಾಗಿ ಮುಗುಳ್ನಕ್ಕರು. ಅವರು ಸಹಜವಾಗಲು ಪ್ರಯತ್ನಿಸಿದರು. ಅಮ್ಮ ಒಂಟಿಯಾಗಿರಲು ಬಯಸುತ್ತಿದ್ದಾರೆ ಎಂದು ಅನ್ನಿಸಿತು. ನಾನು ಬೇಗನೆ ಅಡುಗೆ ಮಾಡಿದೆ, ನಂತರ ಸ್ನಾನ ಮಾಡಿ, ಸ್ವಲ್ಪ ತಿಂದು ಕಾಲೇಜಿಗೆ ಹೊರಟೆ. ಅಂದು ಒಂದು ಪೀರಿಯಡ್‌ನಲ್ಲೂ ನನಗೆ ಮನಸ್ಸಿರಲಿಲ್ಲ. ಅಮ್ಮನ ಬಗ್ಗೆಯೇ ಯೋಚಿಸುತ್ತಿದ್ದೆ. ಕಡೆಗೆ ಕೊನೆಯ ಪೀರಿಯಡ್‌ಗೆ ಚಕ್ಕರ್ ಹಾಕಿ, ಮನೆಗೆ ಬಂದೆ. ನಾನು ಮನೆಯ ಸಮೀಪಕ್ಕೆ ಬಂದಾಗ, ಸೆಲಟ್ ಅಂಕಲ್ ನಮ್ಮ ಮನೆಯಿಂದ ತಮ್ಮ ಸ್ಕೂಟರ್‌ನಲ್ಲಿ ಹೋಗುವುದನ್ನು ನೋಡಿದೆ. ನನಗೆ ಭಯವಾಯಿತು, ನಾನು ಓಡುತ್ತಾ ಮನೆಗೆ ಬಂದೆ.

'ಅಂಕಲ್ ಬಂದಿದ್ರ?' ಇದು ನನ್ನ ಮೊದಲ ಪ್ರಶ್ನೆಯಾಗಿತ್ತು.

'ಹೌದು'

'ಆಂಟಿ ಬಗ್ಗೆ ಹೇಳಿದ್ರಾ?'

'ಅವರಿಗೆ ಗೊತ್ತಿತ್ತು.'

'ಗೊತ್ತಿತ್ತ?' ನನಗೆ ಆಶ್ಚರ್ಯವಾಯಿತು.

'ಇನ್ನು ಸೆಲಟ್ ಅಂಕಲ್ ಎಂದಿಗೂ ಬರಲ್ಲ', ಅಮ್ಮ ಆಶ್ಚರ್ಯದ ವಿಷಯವನ್ನು ಘೋಷಿಸಿದರು.

'ಏಕೆ?'

'ಏಕೆಂದರೆ ಅವರ ಹೆಂಡತಿ ಇದನ್ನೇ ಬಯಸ್ತಾರೆ. ಅವರು ಹೆಂಡತಿಯ ಮಾತನ್ನು ಅಲ್ಲಗಳೆಯಲಾರರು. ನಾನೂ ಸಹ ಇನ್ನೊಬ್ಬರ ಮನೆಯನ್ನು ಹಾಳು ಮಾಡಲು ಬಯಸಲ್ಲ.'

ನಂತರ ಸೆಲಟ್ ಅಂಕಲ್ ಖಂಡಿತವಾಗಿ ನಮ್ಮ ಮನೆಗೆ ಎಂದೂ ಬರಲಿಲ್ಲ. ಕೆಲವು ದಿನಗಳ ನಂತರ ಮತ್ತೊಂದು ಅನಿರೀಕ್ಷಿತ ಘಟನೆ ಘಟಿಸಿತು.

'ನಾವು ಮನೆಯನ್ನು ಬದಲಿಸಬೇಕಾಗುತ್ತೆ' ಅಮ್ಮ ಅದೊಂದು ದಿನ ಅಕಸ್ಮಾತ್ ಹೇಳಿದರು.

'ಏಕೆ?'